ಮೀಟ್ ಮಾಡಿಸಿ. ಹೇಳಬೇಕಾಗುತ್ತದೆ. ನಮಗೇ ಬೇಕು ಅದು. ಹತ್ತಾರು ವರ್ಷಗಳಿಂದ ಪೊಲ್ಲಾವರಂ ಸ್ಕೀಂ ಕೊಡಬೇಕೆಂದಿರುವ ದಾಖಲೆಗಳನ್ನು ಅವರೇ ಓದಿದರು. ಮುಖ್ಯಮಂತ್ರಿಗಳು ಮಾಡಿಕೊಂಡಿರುವ ಒಪ್ಪಂದ ಮಾಡಬೇಕು, ಆಗ ನಮಗೆ 23 ಟಿಎಂಸಿ ನೀರು ಬರುತ್ತದೆ.

5.40 ಪಿ.ಎಂ.

ಎಲ್ಲಾ ಪ್ರಾಜೆಕ್ಟ್ ಪ್ರಿಪೇರ್ ಮಾಡಿಕೊಂಡಿದ್ದೇವೆ. ನಾನು ಮುಖ್ಯಮಂತ್ರಿಗಳ ಜೊತೆ ದೆಹಲಿಗೆ ಹೋಗಿ ಪ್ರಧಾನ ಮಂತ್ರಿಯವರನ್ನು ಭೇಟಿ ಮಾಡಿ ಈ ಸ್ಕೀಮ್‌ನ್ನು ಕ್ಲಿಯರ್ ಮಾಡಿಕೊಡಿ ಎಂದು ಕೇಳುತ್ತೇವೆ.

ಅ) ಟಿ.ಸಿ.ಹೆಚ್. ತೇರ್ಗಡೆಯಾದಂತಹ ವಿದ್ಯಾರ್ಥಿಗಳಿಗೆ ಅಂಕಪಟ್ಟಿ ವಿತರಣೆಯಾಗದಿರುವುದು.

+ಶ್ರೀ ಅರಗ ಜ್ಞಾನೇಂದ್ರ :— ಮಾನ್ಯ ಛೇರ್ಮನ್ ಅವರೇ, ಟಿ.ಸಿ.ಎಚ್. ಪರೀಕ್ಷೆಯಲ್ಲಿ ಪಾಸಾದಂತಹ ವಿದ್ಯಾರ್ಥಿಗಳಿಗೆ ಮಾರ್ಕ್ಸ್ ಕಾರ್ಡ್ ಇನ್ನೂ ಬರಲಿಲ್ಲ. ಈಗಾಗಲೇ ಶಿಕ್ಷಕರ ನೇಮಕಾತಿಗಾಗಿ ಕಾಲ್‌ಫರ್ ಮಾಡಿದ್ದಾರೆ. ನಾಳೆಯೇ ಕೊನೆಯ ದಿನಾಂಕ ಆದರೆ ಈ ಸಾರಿ ಪರೀಕ್ಷೆಯಲ್ಲಿ ಪಾಸಾಗಿರತಕ್ಕಂಥ ವಿದ್ಯಾರ್ಥಿಗಳಿಗೆ ಮಾರ್ಕ್ಸ್ ಕಾರ್ಡ್ ಕೊಡಲು ಅನಾವಶ್ಯಕವಾದಂತಹ ವಿಳಂಬವನ್ನು ಮಾಡುತ್ತಿದ್ದಾರೆ. ಮಲ್ಲೇಶ್ವರಂನಲ್ಲಿರತಕ್ಕಂಥ ಎಸ್.ಎಸ್.ಎಲ್.ಸಿ. ಬೋರ್ಡ್‌ನ ಕಛೇರಿಯ ಕಟ್ಟಡದಲ್ಲಿ ಈಗ ಪೋಲೀಸ್ ಠಾವಲಿನಲ್ಲಿ ಕಛೇರಿ ಕೆಲಸ ನಡೆಯುತ್ತಿದೆ. ಸಾಕಷ್ಟು ಶಾಂತಿ ಭಂಗ ಆಗುವಂತಹ ಪರಿಸ್ಥಿತಿ ಕೂಡ ನಿರ್ಮಾಣ ಆಗಿದೆ. ಇಡೀ ರಾಜ್ಯದ ಮೂಲೆ ಮೂಲೆಗಳಿಂದ ಬಂದಂತಹ ವಿದ್ಯಾರ್ಥಿಗಳು ಮಾರ್ಕ್ಸ್ ಕಾರ್ಡ್‌ನ್ನು ಪಡೆಯಲು ಕೇಳಿದರೆ ಅಲ್ಲಿರತಕ್ಕಂಥ ಅಧಿಕಾರಿಗಳು ಸರಿಯಾದಂತಹ ಉತ್ತರವನ್ನು ಕೊಡುತ್ತಿಲ್ಲ. ಕಛೇರಿಯಲ್ಲಿ ಸಮರ್ಪಕವಾಗಿರತಕ್ಕಂಥ ಕೆಲಸ ಅಲ್ಲಿ ನಡೆಯುತ್ತಾ ಇಲ್ಲ. ಹೀಗಾಗಿ ಆ ವಿದ್ಯಾರ್ಥಿಗಳು ತುಂಬಾ ತೊಂದರೆಗೆ ಒಳಗಾಗಿದ್ದಾರೆ. ಆ ಮಾರ್ಕ್ಸ್ ಕಾರ್ಡ್ ಸಿಗುವವರೆಗೆ ಟಿ.ಸಿ.ಎಚ್.ಗೆ ಏನು ಕಾಲ್‌ಫರ್ ಮಾಡಿದ್ದಾರೆ, ಅದಕ್ಕೆ ನಾಳೆಯೇ ಕೊನೆಯ ದಿನಾಂಕ, ಅದನ್ನು ಸರ್ಕಾರ ಮುಂದೆ ಹಾಕುತ್ತದಾ? ಈ ಸಾರಿ ಶಿಕ್ಷಕರಾಗಿ ಆಯ್ಕೆ ಆಗಲಿಕ್ಕೆ ಅವರಿಗೂ ಒಂದು ಅವಕಾಶವನ್ನು ನಿರ್ಮಾಣ ಮಾಡುತ್ತೀರಾ? ಅಥವಾ ನಾಳೆಯ ಒಳಗಾಗಿ ಮಾರ್ಕ್ಸ್ ಕಾರ್ಡ್ ಕೊಡಿಸುವಂತಹ ವ್ಯವಸ್ಥೆ ಮಾಡುತ್ತೀರಾ? ಏನು ಮಾಡುತ್ತೀರಿ? ಸರ್ಕಾರ ಇದರ ಬಗ್ಗೆ ಗಮನಹರಿಸಿದೆಯೇ ಎನ್ನುವಂತಹದನ್ನು ಈ ಸಂದರ್ಭದಲ್ಲಿ ಕೇಳುವುದಕ್ಕೆ ಬಯಸುತ್ತೇನೆ.

ಶ್ರೀ ಎಸ್.ಎಸ್. ಪಾಟೀಲ್ (ಜವಳಿ ಸಚಿವರು) :— ಮಾನ್ಯ ಅಧ್ಯಕ್ಷರೆ, ಆ ವಿದ್ಯಾರ್ಥಿಗಳಿಗೆ ತೊಂದರೆ ಆಗದಂತೆ ನಾವು ನೋಡಿಕೊಳ್ಳುತ್ತೇವೆ.

ಶ್ರೀ ಅರಗ ಜ್ಞಾನೇಂದ್ರ :— ನಾಳೆಯೇ ಲಾಸ್ಟ್ ಡೇಟ್ ಇದೆ.

ಛೇರ್ಮನ್ :— ಮಾನ್ಯ ಮಂತ್ರಿಗಳು ಮಾತು ಕೊಟ್ಟಿದ್ದಾರೆ. ನಾಳೆಯೇ ಲಾಸ್ಟ್‌ಡೇಟ್ ಅಂತೆ, ಅದಕ್ಕೆ ಸ್ವಲ್ಪ ಏನಾದರೂ ಹೇಳಿ.

ಶ್ರೀ ಆರಗ ಜ್ಞಾನೇಂದ್ರ :— ಅದನ್ನು ಪರಿಶೀಲನೆ ಮಾಡುತ್ತೇನೆ.

೪) ಹುಬ್ಬಳ್ಳಿ-ಧಾರವಾಡ ಮಹಾನಗರದಲ್ಲಿ ಹೈಕೋರ್ಟ್ ಸ್ಥಾಪನೆ ಬಗ್ಗೆ ವಕೀಲರಿಂದ ಆಮರಣ ಉಪವಾಸ.

ಶ್ರೀ ಅಶೋಕ್ ಹಟ್ಟಿ (ಹುಬ್ಬಳ್ಳಿ) :— ಮಾನ್ಯ ಅಧ್ಯಕ್ಷರೆ, ಕಳೆದ ಐದು ದಿವಸಗಳಿಂದ ಹುಬ್ಬಳ್ಳಿ-ಧಾರವಾಡ ಮಹಾ ನಗರದಲ್ಲಿ ವಕೀಲರು ಆಮರಣ ಉಪವಾಸ ಕುಳಿತಿದ್ದಾರೆ. ಶ್ರೀಮತಿ ಕುಲಕರ್ಣಿ ಹಾಗೂ ಪಾಟೀಲ್ ಎಂದು ಹೇಳಿ ಇಬ್ಬರು ಆಮರಣ ಉಪವಾಸ ಕುಳಿತಿದ್ದಾರೆ. ಅವರ ಜೊತೆ ವಕೀಲರೂ ಕುಳಿತಿದ್ದಾರೆ. ಹುಬ್ಬಳ್ಳಿ-ಧಾರವಾಡ ಮಹಾನಗರಕ್ಕೆ ಹೈಕೋರ್ಟ್ ಪೀಠ ಕೊಡಬೇಕು ಎಂದು ಹೇಳಿ ಅವರು ಆಮರಣ ಉಪವಾಸ ಸತ್ಯಾಗ್ರಹ ಮಾಡುತ್ತಿದ್ದಾರೆ. ಅದರಲ್ಲೂ ಸಹ ಕುಲಕರ್ಣಿ ವಕೀಲರ ಪರಿಸ್ಥಿತಿ ಚಿಂತಾಜನಕ ಆಗಿದೆ. ಸರ್ಕಾರ ಏನು ನಿರ್ಣಯ ತೆಗೆದುಕೊಂಡಿದೆ ಎಂದು ನಾನು ಕೇಳುವುದಕ್ಕೆ ಬಯಸುತ್ತೇನೆ.

ಛೇರ್ಮನ್ :— ಮಾನ್ಯ ಮಂತ್ರಿಗಳು ಉತ್ತರ ಕೊಡುವ ಮೊದಲು ಮಾನ್ಯ ಚಂದ್ರಕಾಂತ್ ಬೆಲ್ಲದ್ ಅವರೂ ಕೇಳಲಿ. ಆನಂತರ ನೀವು ಉತ್ತರ ಕೊಡಿ.

ಶ್ರೀ ಅಶೋಕ್ ಹಟ್ಟಿ (ಹುಬ್ಬಳ್ಳಿ) :— ಮಾನ್ಯ ಉಪಾಧ್ಯಕ್ಷರೆ, ಹುಬ್ಬಳ್ಳಿಯಲ್ಲಿ ಹೈಕೋರ್ಟ್ ಪೀಠವನ್ನು ಪ್ರಾರಂಭ ಮಾಡಬೇಕೆಂದು ಕಳೆದ ಐದು ದಿವಸಗಳಿಂದ ಹುಬ್ಬಳ್ಳಿ ಮತ್ತು ಧಾರವಾಡ ಮಹಾನಗರದ ವಕೀಲರು ಆಮರಣ ಉಪವಾಸ ಸತ್ಯಾಗ್ರಹ ಮಾಡುತ್ತಿದ್ದಾರೆ. ಶ್ರೀಮತಿ ಕುಲಕರ್ಣಿ ಮತ್ತು ಶ್ರೀ ಪಾಟೀಲ್ ಎಂಬ ಇಬ್ಬರು ವಕೀಲರು ಆಮರಣ ಉಪವಾಸ ಕುಳಿತಿದ್ದಾರೆ. ಅವರ ಜೊತೆ ಇತರ ವಕೀಲರು ಸತ್ಯಾಗ್ರಹ ಮಾಡುತ್ತಿದ್ದಾರೆ. ಶ್ರೀಮತಿ ಕುಲಕರ್ಣಿಯವರ ಪರಿಸ್ಥಿತಿ ಚಿಂತಾಜನಕವಾಗಿದೆ. ಇದರ ಬಗ್ಗೆ ಸರ್ಕಾರ ಏನು ನಿರ್ಣಯ ತೆಗೆದುಕೊಂಡಿದೆ ಎಂದು ಕೇಳಬಯಸುತ್ತೇನೆ.

ಶ್ರೀ ಚಂದ್ರಕಾಂತಗುರಪ್ಪ ಬೆಲ್ಲದ್ (ಧಾರವಾಡ) :— ಮಾನ್ಯ ಛೇರ್ಮನ್‌ರವರೆ, ಧಾರವಾಡದ ವಕೀಲರ ಸಂಘದವರು ಧಾರವಾಡ ಹುಬ್ಬಳ್ಳಿ ಮಹಾನಗರದಲ್ಲಿ ಹೈಕೋರ್ಟ್ ಪೀಠದ ಸ್ಥಾಪನೆಗೆ ಆಗ್ರಹಪಡಿಸಿ ಆಮರಣ ಉಪವಾಸ ಮಾಡುತ್ತಿದ್ದಾರೆ. ಧಾರವಾಡ ವಕೀಲರ ಸಂಘದ ಅಧ್ಯಕ್ಷರಾದ ಶ್ರೀ ಬಿ.ಟಿ. ಹಿರೇಮಠ್, ಶ್ರೀಮತಿ ಕುಲಕರ್ಣಿ ರವರುಗಳು 27ನೇ ತಾರೀಖಿನಿಂದ ಆಮರಣ ಉಪವಾಸ ಕುಳಿತಿದ್ದಾರೆ. ಅಲ್ಲಿ ಹೈಕೋರ್ಟ್ ಪೀಠವನ್ನು ಸ್ಥಾಪನೆ ಮಾಡಬೇಕೆಂದು ಅವರು ಅನೇಕ ವರ್ಷಗಳಿಂದ ಒತ್ತಾಯ ಮಾಡಿಕೊಂಡು ಬಂದಿದ್ದಾರೆ. ಹದಿನೆಂಟು ವರ್ಷಗಳ ಹಿಂದೆಯೇ ಆಗಿನ ಹೈಕೋರ್ಟ್‌ನ ಮುಖ್ಯ ನ್ಯಾಯ